ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**KARNATAK UNIVERSITY, DHARWAD**

"NAAC' Accredited with "A" Grade 2022"

'A' Grade
NAAC, Accredited 2022

Azadi Ka Amrit Mahotsav

**DEPARTMENT OF PHYSICAL EDUCATION & SPORTS**

Dean, Faculty of Education
Chairman & Director,
Dept. of Physical Education and Sports

Pavate Nagar, Dharwad-580 003
Karnataka - India
0836-2215265 (O)
Email Id: - kud.sports1@gmail.com

Ref. No. KU/DPE/2025-26/97　　　　Date: 08-09-2025

# ಸುತ್ತೋಲೆ

**ವಿಷಯ:** 2025-26 ನೇ ಸಾಲಿನ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟವನ್ನು ಸಂಘಟಿಸುವ ಅರ್ಜಿ ಸಲ್ಲಿಸುವ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಸಭೆಯನ್ನು ಸಂಘಟಿಸುವ ಕುರಿತು.

2025-26 ನೇ ಸಾಲಿನಲ್ಲಿ ಪ್ರತಿ ವರ್ಷದಂತೆ ಕರ್ನಾಟಕ ವಿಶ್ವವಿದ್ಯಾಲಯದ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಶಿಕ್ಷಕರ ಸಭೆಯನ್ನು ದಿನಾಂಕ 12 ಸಪ್ಟಂಬರ್ 2025 (ಶುಕ್ರವಾರ) ರಂದು ಕರ್ನಾಟಕ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಕ್ರೀಡಾ ಭವನದಲ್ಲಿ' ಬೆಳಿಗ್ಗೆ 10.00 ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. 2025-26 ನೇ ಸಾಲಿನಲ್ಲಿ ವಲಯ, ಅಂತರ ವಲಯ ಮತ್ತು ಏಕವಲಯ ಕ್ರೀಡಾಕೂಟಗಳನ್ನು ಸಂಘಟಿಸಲು ಆಸಕ್ತಿಯುಳ್ಳ ಮಹಾವಿದ್ಯಾಲಯಗಳು ಇದಕ್ಕೆ ಲಗತ್ತಿಸಿದ ಅರ್ಜಿ ನಮೂನೆ-1 ರಲ್ಲಿ ಸಂಘಟಿಸುವ ಕ್ರೀಡೆಯ ಸೌಕರ್ಯ ಮತ್ತು ಇತ್ಯಾದಿಗಳನ್ನು ವಿವರವಾಗಿ ಭರಣ ಮಾಡಿ ಪ್ರಾಚಾರ್ಯರ ಅನುಮತಿಯೊಂದಿಗೆ **ದಿನಾಂಕ 10** ಸಪ್ಟಂಬರ್ 2025 ರೊಳಗಾಗಿ ನಿರ್ದೇಶಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಸಲ್ಲಿಸಬೇಕು.

**<u>ಸಭೆಯಲ್ಲಿ ಚರ್ಚಿಸಲಿರುವ ವಿಷಯಗಳು:-</u>**

1. 2024-25 ನೇ ಸಾಲಿನಲ್ಲಿ ಅಂತರ ವಿಶ್ವವಿದ್ಯಾಲಯದ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳ ಹಾಗೂ ತಂಡಗಳ ಒಂದು ಕಿರು ವರದಿ.
2. 2024-25 ನೇ ಸಾಲಿನಲ್ಲಿ ನಡೆದ ಅಂತರ ಮಹಾವಿದ್ಯಾಲಯಗಳ ಕ್ರೀಡೆಗಳ ಸಂಘಟನೆಯ ಕುರಿತು ಚರ್ಚೆ ಹಾಗೂ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟದ, ತರಬೇತಿ ಹಾಗೂ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚೆ.
3. 2025-26 ನೇ ಸಾಲಿನ ಕ್ರೀಡಾ ಪಂಚಾಂಗ ತಯಾರಿಸುವದು.
4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚೆಗೆ ಬರುವ ಇತರ ವಿಷಯಗಳು.

ತಮ್ಮ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಶಿಕ್ಷಕರನ್ನು ಮೇಲೆ ತಿಳಿಸಿದ ದಿನಾಂಕದಂದು ಅನ್ಯಕಾರ್ಯನಿಮಿತ್ತ ರಜೆ ನೀಡಿ ಅವರಿಗೆ ಪ್ರಯಾಣ ಭತ್ತೆ ಹಾಗೂ ದಿನ ಭತ್ತೆಯನ್ನು ತಮ್ಮ ಮಹಾವಿದ್ಯಾಲಯದಿಂದಲೇ ಭರಿಸಿ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ಪಡೆಯಬಹುದು www.kud.ac.in

ನಿರ್ದೇಶಕರು, ದೈಹಿಕ ಶಿಕ್ಷಣ
Director of Physical Education & Sports
Karnatak University, Dharwad.

ಗೆ,

1. ಕುಲಪತಿಗಳ ಆಪ್ತ ಕಾರ್ಯದರ್ಶಿ, ಕ.ವಿ.ವಿ.ಧಾರವಾಡ
2. ಕುಲಸಚಿವರ ಆಪ್ತ ಕಾರ್ಯಾಲಯ, ಕ.ವಿ.ವಿ.ಧಾರವಾಡ
3. ವಿತ್ತಾಧಿಕಾರಿಗಳು, ಕ.ವಿ.ವಿ.ಧಾರವಾಡ
4. ಅಧ್ಯಕ್ಷರು, ಸ್ನಾತಕೋತ್ತರ ವಿದ್ಯಾರ್ಥಿ ಕೂಟ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಆಡಳಿತಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಕಾರವಾರ, ಹಾವೇರಿ ಮತ್ತು ಗದಗ.
6. ಪ್ರಾಚಾರ್ಯರು, ಕ.ವಿ.ವಿ. ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳು.
7. ನಿರ್ದೇಶಕರು, ಆಯ್.ಟಿ. ಇನ್‌ಫಾರ್ಮಶನ್ ವಿಭಾಗ, ಕ.ವಿ.ವಿ.ಧಾರವಾಡ ಇವರಿಗೆ ಕ.ವಿ.ವಿ.ಅಂತರ ಜಾಲದಲ್ಲಿ ಪ್ರಸಾರ ಮಾಡಲು ಕೋರಲಾಗಿದೆ.